**ಐದನೇ ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಲಯ, ಮೇಯೋಹಾಲ್ ವಿಭಾಗ, ಬೆಂಗಳೂರು.**

**ದಿಃ 29.10.2024.ರಂದು ಸಾಕ್ಷಿದಾರರಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದಃ**

ಅಧಿಕಾರ ಪತ್ರ ಸಲ್ಲಿಸಿದ್ದೇನೆ. ಆರೋಪಿ ಕಂಪನಿಯೊಂದಿಗೆ ಕಳೆದ ಹತ್ತು ವರ್ಷಗಳಿಂದ ವ್ಯವಹಾರ ಮಾಡುತ್ತಿದ್ದೇವು. 2011 ರಿಂದ 2019 ರವರೆಗೆ ವ್ಯವಹಾರ ಮಾಡಿದ್ದೇವೆ. ಪರ್ಚೇಸ್ ಆರ್ಡರ್ ನೀಡುತ್ತಿದ್ದರು. ಅದಕ್ಕೆ ಅನುಗುಣವಾಗಿ ಸರಕುಗಳನ್ನು ಸರಬರಾಜು ಮಾಡುತ್ತಿದ್ದೇವು. ನಿಪಿ.5 ರಲ್ಲಿ ನಮೂದಿಸಿರುವ ಮೊತ್ತಕ್ಕೆ ಆರೋಪಿತರು ಪರ್ಚೇಸ್ ಆರ್ಡರ್ ಸಲ್ಲಿಸಿರುವ ಬಗ್ಗೆ ಈಗ ನೆನಪಿಲ್ಲ. ನಿಪಿ.5 ರಲ್ಲಿ ನಮೂದಿಸಿರುವ ಮೊತ್ತದ ವ್ಯವಹಾರ ಸುಮಾರು 2017-18 ರಲ್ಲಿ ಆಗಿರುಬಹುದು. ಪರ್ಚೇಸ್ ಆರ್ಡರ್ ನಾವು ಇಟ್ಟುಕೊಳ್ಳಬಹುದು ಅಥವಾ ನ್ಯಾಯಾಲಯಕ್ಕೆ ಸಲ್ಲಿಸಬಹುದು. ಆರೋಪಿತರು ಎಷ್ಟು ಪರ್ಚೇಸ್ ಆರ್ಡರ್ ನೀಡಿದ್ದರು ಎಂದು ಈಗ ನೆನಪಿಲ್ಲ. ಪರ್ಚೇಸ್ ಆರ್ಡರಗಳನ್ನು ಸಲ್ಲಿಸಿರುವ ಬಗ್ಗೆ ನೆನಪಿಲ್ಲ. ನ್ಯಾಯಾಲಯದ ಮುಂದಿರುವ 2,4 ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಸದರಿಯವರು ಒಂದನೇ ಸಂಸ್ಥೆಯ ಪಾಲುದಾರರು. ಆರೋಪಿತರ ಸಂಸ್ಥೆಯ ಪಾಲುದಾರಿಕೆ ಪತ್ರವನ್ನು ಪಡೆದುಕೊಂಡು ಅವರೊಂದಿಗೆ ವ್ಯವಹರಿಸಿಲ್ಲ. ಜಿ.ಎಸ್.ಟಿ., ಪಾಲುದಾರಿಕೆ ದಾಖಲೆಗಳ ಆಧಾರದ ಮೇಲೆ ಆರೋಪಿತರು ಪಾಲುದಾರರು ಎಂದು ಹೇಳುತ್ತಿದ್ದೇನೆ. ನಿಪಿ.3 ರಂತೆ ಇನವಾಯ್ಸ ಸಲ್ಲಿಸಿದ್ದೇನೆ. ಆರೋಪಿತರು ನಿಮ್ಮೊಂದಿಗೆ ಯಾವುದೆ ವ್ಯವಹಾರ ಮಾಡದಿದ್ದರು ನಿಪಿ.3 ನ್ನು ಸೃಷ್ಟಿಸಿ, ಸುಳ್ಳು ಪ್ರಕರಣ ದಾಖಲಿಸಿದ್ದೀರಿ ಎಂದರೆ ಸರಿಯಲ್ಲ. ನಿಪಿ.4,5 ಕ್ಕೆ ಎರಡನೇ ಆರೋಪಿ ಸಹಿ ಮಾಡಿದ್ದಾರೆ. ಸಾಮಾನ್ಯವಾಗಿ ಎಲ್ಲಾ ಪಾಲುದಾರರು ದಾಖಲೆಗಳಿಗೆ ಸಹಿ ಮಾಡುತ್ತಾರೆ ಎಂದರೆ ಸರಿ. ನಿಪಿ.4 ಕ್ಕೆ ಎರಡನೆ ಆರೋಪಿಯ ಸಹಿ ಮಾತ್ರ ಪಡೆದಿದ್ದೇವೆ, ಆ ಸಮಯದಲ್ಲಿ ಬೇರೆ ಪಾಲುದಾರರು ಇರಲಿಲ್ಲ. ನಿಪಿ.5 ಕ್ಕೆ ಎಲ್ಲಾ ಪಾಲುದಾರರು ಸಹಿ ಮಾಡುತ್ತಿದ್ದರು ಎಂದರೆ ಮಾಹಿತಿ ಇಲ್ಲ ಎನ್ನುತ್ತಾರೆ. ನೋಟಿಸನ್ನು ಒಂದನೆ ಸಂಸ್ಥೆಗೆ ಹಾಗೂ ಉಳಿದ ಆರೋಪಿತರ ಮನೆ ವಿಳಾಸಕ್ಕೆ ನೀಡಿದ್ದೇವೆ, ಸಾಕ್ಷಿ ಸಂಸ್ಥೆ ಮುಚ್ಚಲಾಗಿತ್ತು ಎನ್ನುತ್ತಾರೆ. 2017-18 ರಲ್ಲಿ ಒಂದನೆ ಸಂಸ್ಥೆ ಮುಚ್ಚಲಾದ

ವಿಷಯವನ್ನು ತಿಳಿದುಕೊಂಡಿದ್ದೆ. ಜನವರಿ-2016 ರಲ್ಲಿ ಒಂದನೆ ಆರೋಪಿ ಸಂಸ್ಥೆ ವ್ಯವಹಾರವನ್ನು ಸ್ಥಗಿತಗೊಳಿಸಿತ್ತು ಎಂದರೆ ಸರಿಯಲ್ಲ. ಸಂಸ್ಥೆ ಮುಚ್ಚಿದ ನಂತರವು ಒಂದನೆ ಆರೋಪಿಯೊಂದಿಗೆ ವ್ಯವಹಾರ ಮಾಡುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು, ಮೂರನೇ ಆರೋಪಿ ಶಾಮೀಲಾಗಿ ನಿಪಿ.4 ಕ್ಕೆ ಸಹಿ ಪಡೆದಿದ್ದೀರಿ ಎಂದರೆ ಸರಿಯಲ್ಲ. ನಿಪಿ.4,5 ಕ್ಕೆ ಎರಡನೇ ಆರೋಪಿ ಮಾಡಿಲ್ಲ, ಮೂರನೇ ಆರೋಪಿ ಸಹಿ ಮಾಡಿದ್ದಾರೆ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ಪ್ರಮಾಣೀಕೃತ ಹೇಳಿಕೆಗೆ ನಾನೇ ಮಾಹಿತಿ ನೀಡಿದ್ದೇನೆ. ನಿಪಿ.4,5 ಕ್ಕೆ ಮೂರನೇ ಆರೋಪಿ ಸಹಿ ಮಾಡಿದ್ದರು ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. 2,4 ನೇ ಆರೋಪಿತರಿಗೆ ತೊಂದರೆ ಕೊಡಲು ಸುಳ್ಳು ಪ್ರಕರಣ ದಾಖಲಿಸಿದ್ದೀರಿ ಎಂದರೆ ಸರಿಯಲ್ಲ. ಒಂದನೇ ಆರೋಪಿ ಸಂಸ್ಥೆ ಪಾಲುದಾರಿಕೆ ಪತ್ರವನ್ನು ನೋಡಿಲ್ಲ. ಪಾಲುದಾರಿಕೆ ಪತ್ರ, ಜಿ.ಎಸ್.ಟಿ. ಪತ್ರದ ಬಗ್ಗೆ ಮಾಹಿತಿ ಇಲ್ಲ, ನಮ್ಮ ಸಂಸ್ಥೆ ಲೆಕ್ಕದ ವಿಭಾಗದವರು ಅದನ್ನು ನೋಡುತ್ತಾರೆ ಎನ್ನುತ್ತಾರೆ. ಆರೋಪಿತರ ಸಂಪೂರ್ಣ ಮಾಹಿತಿ ಇದೆ, ಆದರೆ ಈಗ ನೆನಪಿಲ್ಲ. ಪಾಲುದಾರರ ಹೊಣೆಗಾರಿಕೆ ಬಗ್ಗೆ ಮಾಹಿತಿ ಇಲ್ಲ. ನಿಪಿ.5 ಕ್ಕೆ 2,4 ನೇ ಆರೋಪಿತರು ಸಹಿ ಮಾಡಿಲ್ಲ, ಆ ಕಾರಣ ಅವರು ಹಣ ಕೊಡಲ ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

(ಮುಂದುವರೆದ ಪಾಟಿ ಸವಾಲಿಗೆ ಕಾಲಾವಕಾಶ ಕೋರಿ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ. ಹೇ.ಕೇ. ಸರಿ ಇದೆ.

ಐದನೇ ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಲಯ,
ಮೇಯೋಹಾಲ್ ವಿಭಾಗ, ಬೆಂಗಳೂರು.